# ನಾಗರಿಕ ಪೊಲೀಸ್ ಪೇದೆ ನೇಮಕಾತಿ ಮತ್ತು ಮಹಿಳಾ ಪೊಲೀಸ್ ಪೇದೆ 2002

**ಸಮಯ: 90 ನಿಮಿಷಗಳು** **ಅಂಕಗಳು:100**

1. ಸೂರ್ಯನ ಸುತ್ತ ಇರುವ ಗ್ರಹಗಳ ಸಂಖ್ಯೆ

   ಎ) 5 ಬಿ) 3 ಸಿ) 7 ಡಿ) 9

2. ಬೀಳುವ ನಕ್ಷತ್ರಗಳನ್ನು ಏನೆಂದು ಕರೆಯುತ್ತಾರೆ?

   ಎ) ಗ್ರಹಗಳು ಬಿ) ಧೂಮಕೇತು

   ಸಿ) ಉಪಗ್ರಹ ಡಿ) ಉಲ್ಕೆ

3. ಈ ಕೆಳಗಿನ ಯಾವ ರೋಗ ನೀರಿನಿಂದ ಉಂಟಾಗುವುದಿಲ್ಲ?

   ಎ) ಅಸ್ತಮ ಬಿ) ಅಮೀಬಿಕ್ ಡೀಸೆಂಟ್ರಿ

   ಸಿ) ಕಾಲರ ಡಿ) ಟೈಫಾಯಿಡ್

4. ಇನ್ಸುಲೀನ್ ಈ ಕೆಳಕಂಡ ಅಂಶಗಳನ್ನು ನಿಯಂತ್ರಿಸುತ್ತದೆ

   ಎ) ಸಕ್ಕರೆ ಬಿ)ಕೊಬ್ಬು

   ಸಿ) ಗ್ರಂಥಿಗಳು ಡಿ) ಪ್ರೋಟಿನ್ಸ್

5. ವಿಟಮಿನ್ ಸಿ ಕಡಿಮೆ ಆದಾಗ

   ಎ) ಉಸಿರಾಟದ ತೊಂದರೆ ಆಗುವುದು

   ಬಿ) ಉಸಿರಾಟದ ತೊಂದರೆ ಆಗದು

   ಸಿ) ಮೂತ್ರ ಪಿಂಡ ಸರಿಯಾಗಿ ಕಾರ್ಯನಿರ್ವಹಿಸದೇ ಇರುವುದು

   ಡಿ) ಸ್ಕರ್ವಿ ಉಂಟಾಗುವುದು

6. ನೀರಿನ ಸಾಂದ್ರತೆಯು ಈ ಕೆಳಗಿನ ಡಿಗ್ರಿಗಳಲ್ಲಿ ಹೆಚ್ಚಾಗಿರುತ್ತದೆ

   ಎ) 25 ಡಿಗ್ರಿ ಬಿ) 100 ಡಿಗ್ರಿ

   ಸಿ) 0 ಡಿಗ್ರಿ ಡಿ) 4 ಡಿಗ್ರಿ

7. ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಪದ್ಯದ ರಚನಕಾರರೆಂದರೆ

   ಎ) ಜಯಪ್ರಕಾಶ್ ನಾರಾಯಣ್

   ಬಿ) ಗದುಗಿನ ನಾರಾಯಣಪ್ಪ

   ಸಿ) ಹುಯಿಲಗೊಳ ನಾರಾಯಣರಾಯರು

   ಡಿ) ನಂದಳಿಕೆ ಲಕ್ಷ್ಮೀನಾರಾಯಣಪ್ಪ

8. ಕರ್ನಾಟಕದಲ್ಲಿ ಮೊಟ್ಟಮೊದಲ ಸಾಮ್ರಾಜ್ಯವನ್ನು ಕಟ್ಟಿದ ಕೀರ್ತಿ ಸಲ್ಲಿಸಬೇಕಾದುದು ಯಾರಿಗೆ?

   ಎ) ಕದಂಬರು

   ಬಿ) ಹೊಯ್ಸಳರು

   ಸಿ) ರಾಷ್ಟ್ರಕೂಟರು

   ಡಿ) ಬಾದಾಮಿ ಚಾಲುಕ್ಯರು

9. ವಿಶ್ವವಿಖ್ಯಾತ ಇಂಜಿನಿಯರ್, ಆಡಳಿತ ಮುತ್ಸದ್ದಿ ಮತ್ತು ಭಾರತರತ್ನ ಪ್ರಶಸ್ತಿ ಪಡೆದ ಮೈಸೂರಿನ ದಿವಾನರು ಯಾರಾಗಿದ್ದರು?

   ಎ) ಸರ್.ಎಂ. ವಿಶ್ವೇಶ್ವರಯ್ಯ

   ಬಿ) ಸರ್. ಮಿರ್ಜಾ ಇಸ್ಮಾಯಿಲ್

   ಸಿ) ಶೇಷಾದ್ರಿ ಅಯ್ಯರ್

   ಡಿ) ಆನಂದರಾವ್

10. ಕರ್ನಾಟಕದ ಉದ್ಯಾನ ನಗರ ಎಂದೆನಿಸಿಕೊಂಡಿರುವ ಊರು

    ಎ) ಧಾರವಾಡ ಬಿ) ಮಂಗಳೂರು

    ಸಿ) ಮೈಸೂರು ಡಿ) ಬೆಂಗಳೂರು

11. ಕರ್ನಾಟಕದಲ್ಲಿ ರೈಲು ಮಾರ್ಗ ಇಲ್ಲದ ಜಿಲ್ಲೆ

    ಎ) ಮೈಸೂರು ಬಿ) ಕೊಡಗು

    ಸಿ) ಹಾಸನ ಡಿ) ಬೀದರ್

12. ಬೆಂಗಳೂರನ್ನು ಸ್ಥಾಪಿಸಿದ ಮಹಾಪುರುಷ

    ಎ) ಲಾರ್ಡ್‌ಬೆಂಟಿಂಕ್ ಬಿ) ದೇವರಾಜ ಅರಸ್

    ಸಿ) ಕೆಂಪೇಗೌಡ ಡಿ) ಸರ್.ಎಂ.ವಿಶ್ವೇಶ್ವರಯ್ಯ

13. ಕರ್ನಾಟಕ ವಿಧಾನಸೌಧದ ನಿರ್ಮಾಣಕ್ಕೆ ಕಾರಣಕರ್ತರು

    ಎ) ರಾಮಕೃಷ್ಣಹೆಗಡೆ

    ಬಿ) ನಿಜಲಿಂಗಪ್ಪ

    ಸಿ) ಕೆಂಗಲ್ ಹನುಮಂತಯ್ಯ

    ಡಿ) ದೇವರಾಜ್ ಅರಸ್

14. ಸಂಗೊಳ್ಳಿ ರಾಯಣ್ಣ ಯಾವ ಜಿಲ್ಲೆಯವರು?
ಎ) ಧಾರವಾಡ ಬಿ) ಶಿವಮೊಗ್ಗ
ಸಿ) ಬೆಳಗಾಂ ಡಿ) ಗದಗ್

15. ಕಾರಂಜಾ ಡ್ಯಾಂ ಎಲ್ಲಿದೆ?
ಎ) ಕೋಲಾರ ಬಿ) ಗುಲ್ಬರ್ಗ
ಸಿ) ಬೀದರ್ ಡಿ) ಬೆಳಗಾಂ

16. ಗಾಂಧೀಜಿ ಪ್ರಾರಂಭಿಸಿದ ಪ್ರಥಮ ಸತ್ಯಾಗ್ರಹದ ಸ್ಥಳ
ಎ) ದಂಡಿ ಬಿ) ಬರೋಡ
ಸಿ) ಚಂಪಾರಣ್ ಡಿ) ಬಾರ್ಡೋಲಿ

17. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಂಪೂರ್ಣ ಸ್ವಾತಂತ್ರ್ಯದ ಠರಾವು ಮಾಡಿದ ಸ್ಥಳ
ಎ) ಸೂರತ್ ಬಿ) ಲಾಹೋರ್
ಸಿ) ದೆಹಲಿ ಡಿ) ಬಾಂಬೆ

18. ಜಲಿಯನ್ ವಾಲಾಬಾಗ್ ದುರಂತಕ್ಕೆ ಕಾರಣನಾದ ಜನರಲ್ ಡಯರ್ ವಿರುದ್ಧ ಸೇಡು ತೀರಿಸಿಕೊಳ್ಳಲು ಇಂಗ್ಲೆಂಡಿಗೆ ಹೋದ ಭಾರತದ ಸ್ವಾತಂತ್ರ್ಯ ಯೋಧನಾರು?
ಎ) ಸುಖದೇವ್ ಬಿ) ಉದಾಮ್‌ಸಿಂಗ್
ಸಿ) ಭಗತ್‌ಸಿಂಗ್ ಡಿ) ರಾಜಗುರು

19. ಸುಭಾಷ್ ಚಂದ್ರ ಬೋಸ್ ಆಜಾದ್ ಹಿಂದ್ ಫೌಜ್ ಸ್ಥಾಪಿಸಿದ ಸ್ಥಳ
ಎ) ಜಪಾನ್ ಬಿ) ಇಂಡೋನೇಷಿಯ
ಸಿ) ಸಿಂಗಪುರ್ ಡಿ) ಮಲೇಷಿಯಾ

20. ದ್ರೋಣಾಚಾರ್ಯ ಪ್ರಶಸ್ತಿಯನ್ನು ಯಾವುದಕ್ಕಾಗಿ ನೀಡಲಾಗುತ್ತದೆ?
ಎ) ಕ್ರೀಡಾ ಬರವಣಿಗೆಗಾಗಿ
ಬಿ) ಇವು ಯಾವುದೂ ಅಲ್ಲ
ಸಿ) ಉತ್ತಮ ಕ್ರೀಡಾ ಪ್ರದರ್ಶನಕ್ಕಾಗಿ
ಡಿ) ಕ್ರೀಡಾ ತರಬೇತಿಗಾಗಿ

21. ರಣಜಿ ಟ್ರೋಫಿ ಈ ಆಟದೊಂದಿಗೆ ಸಂಬಂಧವಿರುತ್ತದೆ
ಎ) ಬ್ಯಾಡ್ಮಿಂಟನ್ ಬಿ) ಫುಟ್ಬಾಲ್
ಸಿ) ಹಾಕಿ ಡಿ) ಕ್ರಿಕೆಟ್

22. ವಿಶ್ವನಾಥ್ ಆನಂದ್ ಯಾವ ಪಂದ್ಯಕ್ಕೆ ಹೆಸರುವಾಸಿಯಾಗಿದ್ದಾರೆ?
ಎ) ಚೆಸ್ ಬಿ) ಬ್ಯಾಡ್ಮಿಂಟನ್
ಸಿ) ಕ್ರಿಕೆಟ್ ಡಿ) ಟೆನ್ನಿಸ್

23. ಅಶ್ವಿನಿ ನಾಚಪ್ಪ ಯಾವ ಆಟಕ್ಕೆ ಸಂಬಂಧಿಸಿರುತ್ತಾರೆ?
ಎ) ಹಾಕಿ ಬಿ) ಬ್ಯಾಡ್ಮಿಂಟನ್
ಸಿ) ಕ್ರಿಕೆಟ್ ಡಿ) ಅಥ್ಲೆಟಿಕ್ಸ್

24. ಈ ಸರಣಿಯಲ್ಲಿ ಮುಂದಿನ ಸಂಖ್ಯೆಯನ್ನು ಬರೆಯಿರಿ
2,4,5,3,8,2,11,1..............
ಎ) 14.0 ಬಿ) 15.1
ಸಿ) 12.1 ಡಿ) 14.2

25. ಎ,ಬಿ,ಸಿ,ಡಿ,ಇ ಮತ್ತು ಎಫ್ ಎಂಬ 6 ಸಂಸಾರ ಒಂದೇ ಲೈನಲ್ಲಿ ಇರುವ ಮನೆಗಳಲ್ಲಿ ವಾಸವಾಗಿದ್ದಾರೆ. ಬಿ ಎಂಬುವರಿಗೆ ಎಫ್ ಮತ್ತು ಡಿ ಸಂಸಾರ ಅಕ್ಕಪಕ್ಕದಲ್ಲಿರುತ್ತಾರೆ. ಇ-ಎಂಬುವರಿಗೆ ಎ ಮತ್ತು ಸಿ ಅಕ್ಕ ಪಕ್ಕ ದಲ್ಲಿರುತ್ತಾರೆ. ಎ ಎಂಬುವರು ಡಿ ಪಕ್ಕದಲ್ಲಿರುವುದಿಲ್ಲ. ಹಾಗಾದರೆ ಎಫ್ ಅಕ್ಕಪಕ್ಕದಲ್ಲಿ ಯಾರು ಇರುತ್ತಾರೆ?
ಎ) ಬಿ ಮತ್ತು ಸಿ ಬಿ) ಬಿ ಮಾತ್ರ
ಸಿ) ಬಿ ಮತ್ತು ಇ ಡಿ) ಬಿ ಮತ್ತು ಡಿ

26. ರಾಜೇಶ್, ಅನಂತ, ಮಹೇಶ, ಶ್ಯಾಂ ಮತ್ತು ನರಸಿಂಹ ಎಂಬ ಹುಡುಗರು ಒಟ್ಟಿಗೆ ವೃತ್ತಾಕಾರದಲ್ಲಿ ಕುಳಿತಿರುತ್ತಾರೆ. ಶ್ಯಾಂ, ನರಸಿಂಹನ ಬಲಭಾಗದಲ್ಲಿ ಕುಳಿತಿರುತ್ತಾನೆ. ಅನಂತನು ರಾಜೇಶ್ ಮತ್ತು ಶ್ಯಾಂನ ಮಧ್ಯದಲ್ಲಿ ಕುಳಿತಿರುತ್ತಾನೆ. ನರಸಿಂಹನು ಮಹೇಶ್ ಮತ್ತು ಶ್ಯಾಂ ಮಧ್ಯದಲ್ಲಿ ಕುಳಿತಿರುತ್ತಾನೆ. ಹಾಗಾದರೆ ಮಹೇಶನ ಎಡಭಾಗಕ್ಕೆ ಯಾರು ಕುಳಿತಿರುತ್ತಾರೆ?
ಎ) ರಾಜೇಶ್ ಬಿ) ಶ್ಯಾಂ
ಸಿ) ಅನಂತ ಡಿ) ನರಸಿಂಹ

27. ಶಶಿಯು ಪಶ್ಚಿಮಕ್ಕೆ 3 ಕಿ.ಮೀ. ಪ್ರಯಾಣ ಮಾಡಿ ನಂತರ ಎಡಕ್ಕೆ ತಿರುಗಿ ಮತ್ತೆ 2 ಕಿ.ಮೀ. ಪ್ರಯಾಣ ಮಾಡಿ, ಬಲಭಾಗಕ್ಕೆ ತಿರುಗಿ ಪುನಃ 1ಕಿ.ಮೀ. ಪ್ರಯಾಣ ಮಾಡಿ ಮತ್ತೆ ಬಲಕ್ಕೆ ತಿರುಗಿ 5 ಕಿ.ಮೀ. ಪ್ರಯಾಣ ಮಾಡುತ್ತಾನೆ. ಹಾಗಾದರೆ ಶಶಿಯು ಪ್ರಾರಂಭದ ಸ್ಥಳದಿಂದ ಎಷ್ಟು ದೂರ ಇದ್ದಾನೆ?
ಎ) 3 ಕಿ.ಮೀ ಬಿ)11 ಕಿ.ಮೀ
ಸಿ) 5 ಕಿ.ಮೀ ಡಿ)2 ಕಿ.ಮೀ

28. ಈ ದಿವಸ 6ನೇ ಜನವರಿ, 4 ದಿವಸದ ನಂತರ ಶನಿವಾರ ಆದರೆ, ಕಳೆದ ವರ್ಷ 1ನೇ ಡಿಸೆಂಬರ್ ಯಾವ ದಿವಸ ಆಗುತ್ತದೆ?
ಎ) ಸೋಮವಾರ ಬಿ) ಗುರುವಾರ
ಸಿ) ಮಂಗಳವಾರ ಡಿ) ಬುಧವಾರ

29. ಮಾಲ, ಸುಧಾಗಿಂತ ಎರಡು ಪಟ್ಟು ದೊಡ್ಡವಳು. 3 ವರ್ಷದ ಕೆಳಗೆ 3 ಪಟ್ಟು ಸುಧಾಗಿಂತ ಮಾಲ ದೊಡ್ಡವಳಾಗಿದ್ದಳು. ಈಗ ಮಾಲಾಗೆ ಎಷ್ಟು ವರ್ಷ?

ಎ) 6ವರ್ಷ ಬಿ) 12 ವರ್ಷ

ಸಿ) 7 ವರ್ಷ ಡಿ) 9 ವರ್ಷ

30. 20 ಜನರು 40 ಗುಂಡಿಗಳನ್ನು 60 ದಿವಸದಲ್ಲಿ ತೋಡಿರುತ್ತಾರೆ. ಅದೇ ರೀತಿ 10 ಜನರು 20 ಗುಂಡಿಗಳನ್ನು ತೋಡಲು ಎಷ್ಟು ದಿವಸ ಬೇಕಾಗುತ್ತದೆ?

ಎ) 60 ದಿವಸ ಬಿ) 70 ದಿವಸ

ಸಿ) 30 ದಿವಸ ಡಿ) 45 ದಿವಸ

31. 2=5, 4=18, 6=39, 8=68, ಹಾಗಾದರೆ 10=?

ಎ) 81 ಬಿ) 95

ಸಿ) 54 ಡಿ)105

32. ಡಾ. ಕುರಿಯನ್ ಯಾವುದಕ್ಕೆ ಸಂಬಂಧಿಸಿರುತ್ತಾರೆ?

ಎ) ವ್ಯವಸಾಯ

ಬಿ) ಸಾಹಿತ್ಯ

ಸಿ) ಮೆಡಿಸಿನ್

ಡಿ) ಹಾಲು ಉತ್ಪಾದನಾ ಕ್ಷೇತ್ರ

33. ಮನುಷ್ಯನ ದೇಹದ ಸಾಮಾನ್ಯ ಉಷ್ಣತೆಯು

ಎ) $37^0$ F ಬಿ) $94.4^0$ k

ಸಿ) $98.4^0$ F ಡಿ) $36.9^0$ C

34. ಆಮ್ನೆಸ್ಟಿ ಇಂಟರ್ ನ್ಯಾಷನಲ್

ಎ) ವಿಶ್ವಬ್ಯಾಂಕ್‌ನ ಒಂದು ನಿಯೋಗ

ಬಿ) ವಿಶ್ವಸಂಸ್ಥೆಯ ಭಯೋತ್ಪಾದನೆಯನ್ನು ನಿಯಂತ್ರಿಸುವ ಒಂದು ಅಂಗ

ಸಿ) ನಾಗರಿಕ ಹಕ್ಕುಗಳ ಸಂಸ್ಥೆ

ಡಿ) ನಿರಾಶ್ರಿತರ ಶಿಬಿರ

35. ಈ ಸರಣಿಯಲ್ಲಿ ಮುಂದಿನ ಸಂಖ್ಯೆಯನ್ನು ಬರೆಯಿರಿ 4,7,12,19,28....

ಎ) 53 ಬಿ) 21

ಸಿ) 39 ಡಿ) 42

36. ಎ ಎಂಬ ವ್ಯಕ್ತಿಯು ಬಿ ಗಿಂತ ಶೇ. 10 ಹೆಚ್ಚಾಗಿ ಸಂಪಾದಿಸುತ್ತಾನೆ. ಆದರೆ ಶೇ. 15ರಷ್ಟು ಸಿ ಗಿಂತ ಕಡಿಮೆ ಸಂಪಾದನೆ ಮಾಡುತ್ತಾನೆ. ಹಾಗಾದರೆ ಬಿ ಯು ರೂ.85-00 ಸಂಪಾದಿಸಿದರೆ ಸಿ ಸಂಪಾದಿಸುವುದು ಎಷ್ಟು?

ಎ) ರೂ. 115-00 ಬಿ) ರೂ. 100-00

ಸಿ) 100-00 ಡಿ) ರೂ. 105-00

37. ಒಂದು ರೈಲು ಪ್ರತಿ ಗಂಟೆಗೆ 54 ಕಿ.ಮೀ ಹೋಗುತ್ತದೆ. ಅದೇ ರೈಲು 150 ಮೀಟರ್ ಉದ್ದ ಇರುವ ಒಂದು ಬ್ರಿಡ್ಜ್ ದಾಟಲು 15 ಸೆಕೆಂಡ್ ತೆಗೆದುಕೊಳ್ಳುತ್ತದೆ. ಹಾಗಾದರೆ ರೈಲಿನ ಉದ್ದ ಎಷ್ಟು?

ಎ) 60 ಮೀಟರ್ ಬಿ) 80 ಮೀಟರ್

ಸಿ) 50 ಮೀಟರ್ ಡಿ) 75 ಮೀಟರ್

38. ಈ ಕೆಳಗಿನವರುಗಳ ಪೈಕಿ ಯಾರನ್ನು ಅಶೋಕನು ಶ್ರೀಲಂಕಾಗೆ ಬೌದ್ಧಧರ್ಮ ಪ್ರಚಾರ ಮಾಡಲು ನೇಮಿಸಿದನು?

ಎ) ಮಹೇಂದ್ರ ಬಿ) ಬಾಣಭಟ್ಟ

ಸಿ) ಪುಷ್ಯ ಮಿತ್ರ ಡಿ) ಕೌಟಿಲ್ಯ

39. ಅಂತರಾಷ್ಟ್ರೀಯ ಡೇಟ್ ಈ ಮೂಲಕ ಹಾದು ಹೋಗುತ್ತೆ

ಎ) $90^0$ ಗ್ರೀನ್ ವಿಚ್ ಬಿ) $270^0$ ಗ್ರೀನ್ ವಿಚ್

ಸಿ) $0^0$ ಗ್ರೀನ್ ವಿಚ್ ಡಿ) $180^0$ ಗ್ರೀನ್ ವಿಚ್

40. ಕಪ್ಪು ಮಣ್ಣು ಈ ಬೆಳೆಯನ್ನು ಬೆಳೆಯಲು ಉತ್ತಮವಾದದ್ದು

ಎ) ಸೆಣಬು ಬಿ) ಅಕ್ಕಿ

ಸಿ) ಹತ್ತಿ ಡಿ) ಗೋಧಿ

41. ಕುದುರೆಮುಖವು

ಎ) ನೀರಾವರಿ ಯೋಜನೆ

ಬಿ) ಕಬ್ಬಿಣದ ಅದಿರು ಯೋಜನೆ

ಸಿ) ಒಂದು ಪ್ರಾಣಿ

ಡಿ) ಒಂದು ಹಡಗು

42. ವಿಂಡೋಸ್-95 ಒಂದು

ಎ) ಒಂದು ವಿಧವಾದ ಪೀಠೋಪಕರಣ

ಬಿ) ಒಂದು ವಿಧದ ಕಟ್ಟಡ

ಸಿ) ಕಂಪ್ಯೂಟರ್‌ನ ಸಾಫ್ಟ್‌ವೇರ್

ಡಿ) ಕಂಪ್ಯೂಟರ್‌ನ ಹಾರ್ಡ್‌ವೇರ್

43. ಕೊಂಕಣ ರೈಲ್ವೆ ಕಾರ್ಪೋರೇಷನ್ ನಿಯಮಿತವನ್ನು ಈ ಪ್ರದೇಶದಲ್ಲಿ ರೈಲ್ವೆ ಲೈನನ್ನು ಹಾಕುವುದಕ್ಕಾಗಿ ನಿಯೋಜಿಸಲಾಗಿದೆ

ಎ) ಕೊಲ್ಲಾಪುರದಿಂದ ಕ್ವಿಲಾನ್‌ವರೆಗೆ

ಬಿ) ಪಣಜಿಯಿಂದ ಕೋಜಿಕೋಡ್‌ವರೆಗೆ

ಸಿ) ರೋಹಾದಿಂದ ಮಂಗಳೂರಿಗೆ

ಡಿ) ಮನ್ ಮಾಡ್‌ನಿಂದ ಕೊಯಮುತ್ತೂರುವರೆಗೆ

44. ಮದರ್ ತೆರೆಸಾ ಮಹಿಳಾ ವಿಶ್ವವಿದ್ಯಾಲಯ ಎಲ್ಲಿದೆ?

ಎ) ಮುಂಬೈ ಬಿ) ಕೊಟ್ಟಾಯಂ

ಸಿ) ಕೊಲ್ಕೊತ್ತ ಡಿ) ಕೊಡೈಕೆನಾಲ್

45. ಮಿರ್ಜಾ ತಾನಸೇನ್ ಇಸ್ಲಾಂ ಧರ್ಮವನ್ನು ಸ್ವೀಕರಿಸುವ ಮೊದಲು ಆತನಿಗಿದ್ದ ಹೆಸರೇನು?

ಎ) ರಾಮಚಂದ್ರ ಬಗೇಲ ಬಿ) ಬಿಜು

ಸಿ) ತನ್ ಮಿಶ್ರ ಡಿ) ಮಿಶ್ರಾಸಿಂಗ್

46. ರಾಷ್ಟ್ರಾಧ್ಯಕ್ಷರು ಲೋಕಸಭೆಗೆ ಈ ಜನಾಂಗಕ್ಕೆ ಸೇರಿದ ಇಬ್ಬರು ಸದಸ್ಯರನ್ನು ನೇಮಿಸಬಹುದು

ಎ) ಪರಿಶಿಷ್ಟ ಜಾತಿ

ಬಿ) ಪರಿಶಿಷ್ಟ ವರ್ಗ

ಸಿ) ಆಂಗ್ಲೋ ಇಂಡಿಯನ್ ಜನಾಂಗ

ಡಿ) ಪಾರ್ಸಿಜನಾಂಗ

47. ತಾಳಿಕೋಟೆ ಕದನದಿಂದ ಈ ಸಾಮ್ರಾಜ್ಯ ಪತನವಾಯಿತು

ಎ) ಮೌರ್ಯ ಬಿ) ಚಾಲುಕ್ಯ

ಸಿ) ವಿಜಯನಗರ ಡಿ) ಮೊಘಲ್

48. ಭಾರತದ ಈ ಕ್ರಾಂತಿಕಾರನು ಉಪವಾಸ ಸತ್ಯಾಗ್ರಹದಿಂದ ಜೈಲಿನಲ್ಲಿ ಮರಣ ಹೊಂದಿದನು

ಎ) ಸುಖದೇವ್ ಬಿ) ಭಗತ್‌ಸಿಂಗ್

ಸಿ) ಜತಿನ್ ದಾಸ್ ಡಿ) ರಾಜಗುರು

49. ಚಂದ್ರಲೋಕದಲ್ಲಿ ಗುರುತ್ವಾಕರ್ಷಣೆಯು

ಎ) ಭೂಮಿಗಿಂತ 1/6 ಭಾಗ

ಬಿ) ಭೂಮಿಗಿಂತ 1/12 ಭಾಗ

ಸಿ) ಭೂಮಿಗಿಂತ ಎರಡು ಪಟ್ಟು ಜಾಸ್ತಿ

ಡಿ) ಭೂಮಿಗಿಂತ ಕಾಲು ಭಾಗ

50. ಪೌರ್ಣಮಿಯು ಯಾವಾಗ ಬರುತ್ತದೆ?

ಎ) ಸೂರ್ಯನು ಭೂಮಿ ಮತ್ತು ಚಂದ್ರನ ಮಧ್ಯೆ ಇರುವಾಗ

ಬಿ) ಭೂಮಿಯು ಸೂರ್ಯ ಮತ್ತು ಚಂದ್ರನ ಮಧ್ಯೆ ಇರುವಾಗ

ಸಿ) ಚಂದ್ರನು ಸೂರ್ಯ ಮತ್ತು ಭೂಮಿಯ ಮಧ್ಯೆ ಇರುವಾಗ

ಡಿ) ಇವು ಯಾವುದೂ ಅಲ್ಲ

51. ವಿಶ್ವದಲ್ಲಿ ಭಾರತವು ಜನಸಂಖ್ಯೆಯ ಗಾತ್ರಕ್ಕೆ ಸಂಬಂಧಿಸಿದಂತೆ ಎಷ್ಟನೇ ಸ್ಥಾನದಲ್ಲಿದೆ?

ಎ) ತೃತೀಯ ಸ್ಥಾನ ಬಿ) ಚತುರ್ಥ ಸ್ಥಾನ

ಸಿ) ಪ್ರಥಮ ಸ್ಥಾನ ಡಿ) ದ್ವಿತೀಯ ಸ್ಥಾನ

52. ಕರ್ನಾಟಕ ರಾಜ್ಯದ ಗೃಹ ಸಚಿವರು ಯಾರು?

ಎ) ಧರಂ ಸಿಂಗ್ ಬಿ) ರೋಷನ್ ಬೇಗ್

ಸಿ) ಎಸ್.ಎಂ.ಕೃಷ್ಣ ಡಿ) ಎಂ.ಪಿ. ಪ್ರಕಾಶ್

53. ಬ್ಲಾಕ್‌ಬೋರ್ಡ್ ಕಾರ್ಯಾಚರಣೆಯನ್ನು 1987–88ರಲ್ಲಿ ಈ ಕೆಳಕಂಡ ಉದ್ದೇಶಗಳಿಗಾಗಿ ಮೂಲ ಸೌಲಭ್ಯವನ್ನು ಒದಗಿಸಲು ಪ್ರಾರಂಭಿಸಿದ್ದು

ಎ) ಮೂಲ ಶಿಕ್ಷಣ ಬಿ) ತಾಂತ್ರಿಕ ಶಿಕ್ಷಣ

ಸಿ) ವಯಸ್ಕರ ಶಿಕ್ಷಣ ಡಿ) ಮಹಿಳೆಯರ ಶಿಕ್ಷಣ

54. ನಾಲ್ಕನೇ ಪಂಚವಾರ್ಷಿಕ ಯೋಜನೆಯ ಮುಖ್ಯ ಘೋಷಣೆ

ಎ) ಮರು ಹಂಚಿಕೆಯೊಂದಿಗೆ ಬೆಳವಣಿಗೆ

ಬಿ) ಉದ್ಯೋಗ ಸೃಷ್ಟಿ ಮತ್ತು ಬಡತನ ನಿವಾರಣೆ

ಸಿ) ಗರೀಬಿ ಹಟಾವೋ

ಡಿ) ಕನಿಷ್ಠ ಅವಶ್ಯಕತೆಗಳ ಕಾರ್ಯಕ್ರಮ

55. ಭಾರತೀಯ ಸಾಹಿತ್ಯದ ಅತ್ಯುತ್ತಮ ಪ್ರಶಸ್ತಿ ಇದಾಗಿದೆ

ಎ) ಕಬೀರ್ ಸಮ್ಮಾನ್

ಬಿ) ಭಾರತ ರತ್ನ

ಸಿ) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಡಿ) ಜ್ಞಾನಪೀಠ

56. ದೆಹಲಿಯ ಮೊಟ್ಟಮೊದಲ ಮಹಿಳಾ ಸಾಮ್ರಾಜ್ಞೆ

ಎ) ರಜಿಯಾ ಸುಲ್ತಾನಾ

ಬಿ) ಮಮ್ತಾಜ್ ಮಹಲ್

ಸಿ) ಹಮೀದಾ ಬಾನು ಬೇಗಂ

ಡಿ) ನೂರ್ ಜಹಾನ್

57. 1893ರಲ್ಲಿ ಚಿಕಾಗೋನಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿದವರು

ಎ) ಸ್ವಾಮಿದಯಾನಂದ

ಬಿ) ರಾಮಕೃಷ್ಣ ಪರಮಹಂಸ

ಸಿ) ದಾದಾಬಾಯ್ ನವರೋಜಿ

ಡಿ) ಸ್ವಾಮಿ ವಿವೇಕಾನಂದ